# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ ಮೈಸೂರು – 570006

**ಪ್ರವೇಶಾತಿ ವಿಭಾಗ**

ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/ಇತರೆ/117/2025-26 ದಿನಾಂಕ: 27.05.2025

ಗೆ:

ಶ್ರೀ ಸಂತೋಷ್ ದೀಕ್ಷಿತ್,
ಪ್ರಾಂಶುಪಾಲರು,
ಶ್ರೀ ಸಾಯಿ ಸಂಜೆ ಕಾಲೇಜು,
ನ್ಯೂ ಬೆಲ್ ರಸ್ತೆ, ಎಂಎಸ್ಆರ್ ನಗರ,
ಮತ್ತಿಕೆರೆ, ಬೆಂಗಳೂರು – 560 054.

**ಮಾನ್ಯರೆ,**

ವಿಷಯ:2024-25ರ ಜುಲೈ ಆವೃತ್ತಿಯಲ್ಲಿನ 117 ವಿದ್ಯಾರ್ಥಿಗಳ ಪ್ರವೇಶಾತಿ ನವೀಕರಣ ಮಾಡಲು ಕೋರಿರುವ ಬಗೆಗೆ:

ಉಲ್ಲೇಖ:1.ಮಾನ್ಯ ಉಚ್ಚ ನ್ಯಾಯಾಲಯ WP No: 12083/2025ರಲ್ಲಿನ ಆದೇಶ ದಿನಾಂಕ:02.05.2025.
2. ವಿವಿ ಆದೇಶ ಸಂಖ್ಯೆ: ಕರಾಮುವಿ/ ಡೀನ್(ಆಕೇ)/ ಕಸಕೇ/ಡಿಎಸ್‌ಸಿ 07/ಎಸ್ಎಸ್ಇಸಿ/25-26, ದಿನಾಂಕ:29.04.2025 / 07. 05.2025
3. ಈ ಕಚೇರಿ ಪತ್ರದ ಸಮಸಂಖ್ಯೆ, ದಿನಾಂಕ: 23.05.2025
4. ತಮ್ಮ ಮನವಿಗಳ ಇ-ಮೇಲ್ ದಿನಾಂಕ: 24.05.25 ಮತ್ತು 27.05.25
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27.05.2025

*******

2024-25ರ ಜುಲೈ ಆವೃತ್ತಿಯಲ್ಲಿನ 117 ವಿದ್ಯಾರ್ಥಿಗಳಿಗೆ ಪ್ರವೇಶಾತಿ ನವೀಕರಣದ ವಿಷಯವಾಗಿ ತಾವು ವಿಶ್ವವಿದ್ಯಾನಿಲಯದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿದ್ದ WP No: 12083/2025 ರ ಪ್ರಕರಣವು ಉಲ್ಲೇಖಿತ (1)ರ ದಿನಾಂಕ: 02.05.2025ರಂದು ವಜಾಗೊಂಡಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಮುಂದುವರೆದು ಕೆಳಕಂಡಂತೆ ಆದೇಶಿಸಿರುತ್ತದೆ;

- <u>Liberty is reserved to the petitioner college/student to make payment of the due amounts, directing respondents No. 1 to 5 to open the portal within one week after such payment, record the attendance of the students going forward and enable the students to take up the examinations next to be conducted.</u>

ಮಾನ್ಯ ನ್ಯಾಯಾಲಯದ ಮೇಲ್ಕಂಡ ಆದೇಶವನ್ನು ವಿವಿ ನಿಲಯವು ಅನುಷ್ಠಾನ ಗೊಳಿಸಲು/ಅನುಷ್ಠಾನಗೊಳಿಸಿದಲ್ಲಿ ಉಂಟಾಗುವ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಈಗಾಗಲೇ ತಮಗೆ ಉಲ್ಲೇಖ(3)ರ ಈ ಕಚೇರಿ ಪತ್ರದಲ್ಲಿ ಸವಿಸ್ತಾರವಾಗಿ ತಿಳಿಸಲಾಗಿರುತ್ತದೆ (ಅನುಬಂಧ – 01).

ಸದರಿ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವ ನಿಟ್ಟಿನಲ್ಲಿ ವಿವಿ ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ವಿದ್ಯಾಥಿಗಳಿಗೂ ದಿನಾಂಕ:27.05.2025ರಂದು ಪ್ರತ್ಯೇಕವಾಗಿ ಇ-ಮೇಲ್ ಮೂಲಕ ತಿಳಿಸಲಾಗಿರುತ್ತದೆ. ಆದಾಗ್ಯೂ ತಾವು ಸದರಿ ವಿದ್ಯಾರ್ಥಿಗಳ ಪ್ರವೇಶಾತಿ ವಿಷಯ ವಾಗಿ ಉಲ್ಲೇಖ (4)ರ ಇ-ಮೇಲ್‌ಗಳಲ್ಲಿ ಕೋರಿರುತ್ತೀರಿ.

ಆದ್ದರಿಂದ, ತಾವು ಮೇಲ್ಕಂಡ 117 ವಿದ್ಯಾರ್ಥಿಗಳಿಗೆ 2025-26ನೇ ಸಾಲಿನ ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ನವೀಕರಣ ಮಾಡಿಕೊಂಡು, ವಿಶ್ವವಿದ್ಯಾನಿಲಯವು ಒದಗಿಸುವ ಎಲ್ಲಾ ಶೈಕ್ಷಣಿಕ ಸೇವೆಗಳ ಉಪಯೋಗ (ಪ್ರಾಯೋಗಿಕ ಪರೀಕ್ಷೆಗಳು ಮತ್ತು ಸಂಪರ್ಕ ಕಾರ್ಯಕ್ರಮ) ಗಳನ್ನು ಹಾಗೂ ಆಂತರಿಕ ನಿಬಂಧನೆಗಳ ಅಂಕಗಳನ್ನು ನಿಯಮಾನುಸಾರ ಪಡೆದು ಈ ಸಾಲಿನ ವಿದ್ಯಾರ್ಥಿಗಳಿಗೆ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ತಿಳಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ,

27/5/25

ಕುಲಸಚಿವ

ಪ್ರತಿ:

1. ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4. ಉಪಕುಲಸಚಿವರು, ಕಾನೂನು ಘಟಕ, ಕರಾಮುವಿ, ಮೈಸೂರು – ಮುಂದಿನ ಅಗತ್ಯ ಕ್ರಮಕ್ಕಾಗಿ.
5. ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ – ವಿವಿ ಅಧಿಕೃತ ಅಂತರ್ಜಾಲ (www.ksoumysuru.ac.in) ರಲ್ಲಿ ಪ್ರಕಟಿಸುವ ಮೂಲಕ ಗಮನಕ್ಕೆ ತರಲಾಗಿದೆ.
6. ಡಾ:ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿಯ ಅಧಿಕೃತ ಅಂತರ್ಜಾಲ ನಿರ್ವಹಣೆ, ಕರಾಮುವಿ ಇವರಿಗೆ – ಈ ಪತ್ರವನ್ನು ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸುವುದು.
7. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
8. ಕಚೇರಿ ಪ್ರತಿ.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ ಮೈಸೂರು – 570006

**ಪ್ರವೇಶಾತಿ ವಿಭಾಗ**

ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/ಇತರೆ/117/2025-26 ದಿನಾಂಕ: 22.05.2025

ಗೆ:

ಶ್ರೀ ಸಂತೋಷ್ ದೀಕ್ಷಿತ್,
ಪ್ರಾಂಶುಪಾಲರು,
ಶ್ರೀ ಸಾಯಿ ಸಂಜೆ ಕಾಲೇಜು,
ನ್ಯೂ ಬೆಲ್ ರಸ್ತೆ, ಎಂಎಸ್ಆರ್ ನಗರ,
ಮತ್ತಿಕೆರೆ, ಬೆಂಗಳೂರು – 560 054.

ಮಾನ್ಯರೆ,

ವಿಷಯ:2024-25ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿ ನವೀಕರಣ ಮಾಡುವ ಕುರಿತು ವಿವಿ ನಿಲಯದ ವಿರುದ್ಧ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ ಹೂಡಿರುವ ಕುರಿತು:

ಉಲ್ಲೇಖ: 1. ಮಾನ್ಯ ಉಚ್ಛ ನ್ಯಾಯಾಲಯ WP No: 12083/2025 ರಲ್ಲಿ ದಿನಾಂಕ:02.05.2025 ರಂದು ಹೊರಡಿಸಿರುವ ಆದೇಶ.

2. ವಿವಿಯ ಕಾನೂನು ಘಟಕದ ಟಿಪ್ಪಣಿಯ ಸಂಖ್ಯೆ:ಕರಾಮುವಿ/ಆವಿ/ಕಾನೂನು ಘಟಕ – 1208 /25-26, ದಿನಾಂಕ: 09/ 14.05.2025.
3. ವಿವಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಆಕೇ)/ಕಸಕೇ/ಡಿಎಸ್‌ಸಿ07/ಎಸ್‌ಎಸ್ ಇಸಿ /2025-26, ದಿನಾಂಕ:29.04.2025 / 07.05.2025
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.05.2025

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲೊಂದಾದ Sri Sai Evening College, Bengaluru ಇವರು 2024-25ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿ ನವೀಕರಣ ಸಂಬಂಧ ವಿಶ್ವವಿದ್ಯಾನಿಲಯದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ WP No: 12083/2025 ಅನ್ನು ದಾಖಲಿಸಿ ತನ್ನ ಸಂಸ್ಥೆಗೆ 117 ವಿದ್ಯಾರ್ಥಿಗಳು ವಿವಿಧ ಕೋರ್ಸುಗಳ ಪ್ರವೇಶಾತಿಗಾಗಿ ಶುಲ್ಕವನ್ನು ಪಾವತಿಸಿದ್ದು, ಈ ಮೊತ್ತವನ್ನು ವಿವಿ ನಿಲಯವು ಸ್ವೀಕರಿಸಿ ಪರೀಕ್ಷೆಗಳನ್ನು ನಡೆಸಲು ಅವಕಾಶ ಕಲ್ಪಿಸುವಂತೆ ವಿವಿ ನಿಲಯಕ್ಕೆ ದಿನಾಂಕ:11.02.2025ರಂದು ನೀಡಿರುವ ಮನವಿಯನ್ನು ಪರಿಗಣಿಸುವಂತೆ ಆದೇಶ ಕೋರಿ ಪ್ರಕರಣ ದಾಖಲಿಸಿದ್ದು ಮಾನ್ಯ ನ್ಯಾಯಾಲಯವು ಉಲ್ಲೇಖ (1)ರಂತೆ, ದಿನಾಂಕ: 02.05.2025ರಂದು ಪ್ರಕರಣದ ವಿಚಾರಣೆ ನಡೆಸಿ ಕೆಳಕಂಡಂತೆ ನಿರ್ದೇಶಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಿರುತ್ತದೆ.

- There is nothing which has been placed on record to indicate whether the learner has attended any of the programmes, if so, how many programmes, what is the percentage of attendance and if the lab component has been attended by such a learner. This being the pre requisite for summative assessment in the form of end-semester examination the pre requisite not only is satisfied, Iam of the considered opinion that there cannot be n exception made out to the petitioner college/student

to take up the examination without complying with the proviso to Sub-rgegulation (3) of Regulation 15 of the aforesaid Regulations.

- **In that view of the matter, no ground being made out the petition stands dismissed.**
- Liberty is reserved to the petitioner college/student to make payment of the due amounts, directing respondents No. 1 to 5 to open the portal within one week after such payment, record the attendance of the students going forward and enable the students to take up the examinations next to be conducted.

ಯುಜಿಸಿ ಓಡಿಎಲ್ ನಿಯಮಗಳು 2018 ಮತ್ತು 2020ರನ್ವಯ ಪ್ರವೇಶಾತಿ ಪ್ರಕ್ರಿಯೆಯು ವಿವಿಯ ಕೇಂದ್ರ ಕಚೇರಿ ಕೇಂದ್ರಿತವಾಗಿದ್ದು, ಕಲಿಕಾರ್ಥಿ ಸಹಾಯ ಕೇಂದ್ರಗಳು ಕೇವಲ ಪ್ರವೇಶಾತಿ ಪೂರ್ವ ಸಮಾಲೋಚನೆ ಮಾಡಲು ಮಾತ್ರ ಅವಕಾಶವಿರುತ್ತದೆ. ಪ್ರವೇಶಾತಿ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದು, ಅವರ ಪರವಾಗಿ ವಿವಿ ನಿಲಯಕ್ಕೆ ಕಲಿಕಾರ್ಥಿ ಸಹಾಯ ಕೇಂದ್ರವು ಪಾವತಿಸಲು ಅವಕಾಶವಿರುವುದಿಲ್ಲ. ಇದು ಯುಜಿಸಿಯ ಒಡಿಎಲ್ ರೆಗ್ಯುಲೇಷನ್ಸ್‌ಗಳಲ್ಲಿನ ಅಂಶಗಳ ಉಲ್ಲಂಘನೆಯಾಗಿರುತ್ತದೆ.

ವಿದ್ಯಾರ್ಥಿಗಳು ಇಚ್ಛೆಪಟ್ಟಲ್ಲಿ ಪ್ರವೇಶಾತಿ ಪೂರ್ವ ಸಮಾಲೋಚನೆಯನ್ನು (Pre Admission Counselling only) ಅನ್ನು ಮಾತ್ರ ನಿರ್ವಹಿಸಲು www.ksoumysuru.ac.in ನಲ್ಲಿರುವ ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ವಿವಿಯು ಅವಕಾಶ ಕಲ್ಪಿಸಿರುವುದನ್ನು ವಿಶ್ವವಿದ್ಯಾನಿಲಯವು ತನ್ನ ಹೊಸ ಪ್ರವೇಶಾತಿ ಸಮಯದಲ್ಲಿ ಹೊರಡಿಸುವ ಪ್ರವೇಶಾತಿ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ.

ಮುಂದುವರೆದು, ಆಯಾ ಶಿಕ್ಷಣಕ್ರಮಗಳಿಗೆ ವಿಶ್ವವಿದ್ಯಾನಿಲಯವು ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಿದ್ದು, ವಿವರವನ್ನು ವಿವಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ನಿಗದಿತ ಶುಲ್ಕವನ್ನು ಮಾತ್ರ ಆನ್‌ಲೈನ್‌ನಲ್ಲಿ ಪಾವತಿಸಲು ಸೂಚಿಸಲಾಗಿದೆ. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ಯಾರಿಗೂ ಪಾವತಿಸುವಂತಿಲ್ಲ. ಆದಾಗ್ಯೂ ವಿದ್ಯಾರ್ಥಿಗಳು/ ಪೋಷಕರು ಯಾವುದೇ ಹೆಚ್ಚುವರಿ ಶುಲ್ಕ ನೀಡಿದಲ್ಲಿ ವಿವಿ ನಿಲಯವು ಅದಕ್ಕೆ ಜವಾಬ್ದಾರರಾಗಿರುವುದಿಲ್ಲ. ಮುಂದುವರೆದು ವಿವಿಯ ಕೇಂದ್ರ ಕಛೇರಿ, ಮೈಸೂರು ಹಾಗೂ ಅಧಿಕೃತ ಪ್ರಾದೇಶಿಕ ಕೇಂದ್ರಗಳಲ್ಲದೇ ವಿವಿ ಪರವಾಗಿ ಪ್ರವೇಶಾತಿ ವಿಷಯವಾಗಿ ಕಾರ್ಯ ನಿರ್ವಹಿಸಲು ಯಾವುದೇ ವ್ಯಕ್ತಿ / ಸಂಸ್ಥೆಗೆ ಅಧಿಕಾರ ನೀಡಿರುವುದಿಲ್ಲ.

ಮುಂದುವರೆದು, Sri Sai Evening College, Bengaluru ಕಲಿಕಾರ್ಥಿ ಸಹಾಯ ಕೇಂದ್ರವನ್ನು ಅವರಿಗೆ ಹಿಂದೆ ಅಂತಿಮ ಎಚ್ಚರಿಕೆಯನ್ನು ನೀಡಿದ್ದರೂ ಸಹ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ಪಡೆದಿರುವ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿನ ಕಾರಣಗಳ ಮೇಲೆ ವಿಶ್ವವಿದ್ಯಾನಿಲಯದ ಡೀನ್ (ಅಧ್ಯಯನ ಕೇಂದ್ರ) ವಿಭಾಗದ ಆದೇಶ ಸಂಖ್ಯೆ: ಕರಾಮುವಿ/ಡೀನ್ (ಅಕೇ)/ಕಸಕೇ/DSC07/SSEC/25-26, ದಿನಾಂಕ:29.04.25/ 07.05.2025 ರಲ್ಲಿ ಇವರ ಕಲಿಕಾರ್ಥಿ ಸಹಾಯ ಕೇಂದ್ರವನ್ನು ರದ್ದುಗೊಳಿಸಿರುತ್ತದೆ.

2024-25ರ ಜುಲೈ ಆವೃತ್ತಿಯ ಪ್ರವೇಶಾತಿ ನವೀಕರಣ ಕಾರ್ಯವು ಸಂಪೂರ್ಣವಾಗಿ ಪೂರ್ಣಗೊಂಡಿರುತ್ತದೆ. ನಂತರದಲ್ಲಿನ 2024-25ರ ಜನವರಿ ಆವೃತ್ತಿಯ ಪ್ರವೇಶಾತಿ ನವೀಕರಣ ಕಾರ್ಯವೂ ಪೂರ್ಣಗೊಂಡಿರುತ್ತದೆ.

ವಿಶ್ವವಿದ್ಯಾನಿಲಯವು ತನ್ನ ಪ್ರವೇಶಾತಿ ನವೀಕರಣ ಕಾರ್ಯವನ್ನು ಆನ್‌ಲೈನ್‌ನಲ್ಲಿ ಅಡ್ಮಿಷನ್ ಪೋರ್ಟಲ್ ಮೂಲಕ ನಿರ್ವಹಿಸುತ್ತಿರುವುದರಿಂದ ಅಡ್ಮಿಷನ್ ಪೋರ್ಟಲ್ ಓಪನ್ ಮಾಡಿದಲ್ಲಿ ಇಂತಹ ವಿದ್ಯಾರ್ಥಿಯೇ ಪ್ರವೇಶಾತಿ ನವೀಕರಣ ಶುಲ್ಕ ಪಾವತಿಸಲು ಆಗುವುದಿಲ್ಲ,

ಮಾನ್ಯ ನ್ಯಾಯಾಲಯದ ಆದೇಶದಲ್ಲಿ ಉಲ್ಲೇಖಿಸಿರುವ 117 ವಿದ್ಯಾರ್ಥಿಗಳನ್ನು ಹೊರೆತುಪಡಿಸಿ ಇತರೆ ವಿದ್ಯಾರ್ಥಿಗಳು ಪ್ರವೇಶಾತಿ ಮಾಡಿಕೊಳ್ಳದಂತೆ ನಿರ್ಬಂಧಿಸಲು ಅವಕಾಶವಿರುವುದಿಲ್ಲ. ಆದುದರಿಂದ ಕೇವಲ

Sri Sai Evening College, Bengaluru ಕಲಿಕಾರ್ಥಿ ಸಹಾಯ ಕೇಂದ್ರದ ವಿದ್ಯಾರ್ಥಿಗಳಿಗೆ ಮಾತ್ರವೇ ಅಡ್ಮಿಷನ್‌ಗಾಗಿ ಪೋರ್ಟಲ್‌ಅನ್ನು ಓಪನ್ ಮಾಡಿ ಅವರಿಗೆ ಮಾತ್ರ (ಇಂತಿಷ್ಟೇ ವಿದ್ಯಾರ್ಥಿಗಳಿಗೆಂದು) ಸೀಮಿತಗೊಳಿಸಲು ಆಗುವುದಿಲ್ಲ. ಪೋರ್ಟಲ್ ಓಪನ್ ಆದಲ್ಲಿ ಆ ಸಾಲಿನ ಯಾವುದೇ ವಿದ್ಯಾರ್ಥಿ ಶುಲ್ಕ ಪಾವತಿಸಲು ಅವಕಾಶವಿರುತ್ತದೆ.

2024-25ನೇ ಸಾಲಿನ ಜುಲೈ ಆವೃತ್ತಿಯಲ್ಲಿ 2/3ನೇ (ಅಂದರೆ 2/3ನೇ ವಾರ್ಷಿಕ ಹಾಗೂ 3/5ನೇ ಸೆಮಿಸ್ಟರ್‌ಗೆ) ಯುಜಿ / ಪಿಜಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ನವೀಕರಣ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಆಂತರಿಕ ನಿಬಂಧನೆಯನ್ನು ಸಲ್ಲಿಸಲು ಈಗಾಗಲೇ ಕಾಲಾವಕಾಶ ಮುಗಿದಿದ್ದು, ಪರೀಕ್ಷೆಯೂ ಸಹ ಪ್ರಾರಂಭವಾಗಿ ಮುಂದುವರೆದಿರುತ್ತದೆ. ಉಲ್ಲೇಖ(1)ರ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಲ್ಲಿ "enable the students to take up the examinations next to be conducted" ಎಂದು ಆದೇಶಿಸಿರುತ್ತದೆ. ಆದ್ದರಿಂದ ಸದರಿ ನಿರ್ದಿಷ್ಟ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿದ್ದಾಗ್ಯೂ ಪ್ರಸ್ತುತ ನಡೆಯುತ್ತಿರುವ ಪರೀಕ್ಷೆಗಳಲ್ಲಿ ಸದರಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಆಸ್ಪದವಾಗದೆ ಮುಂದಿನ 2025-26ರ ಜುಲೈ ಆವೃತ್ತಿಯ ವಿದ್ಯಾರ್ಥಿಗಳೊಂದಿಗೆ ಪರೀಕ್ಷೆ ಬರೆಯ ಬೇಕಿರುತ್ತದೆ.

ಮುಂದುವರೆದು, 2024-25ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿ ನವೀಕರಣ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಸಂಪರ್ಕ ಕಾರ್ಯಕ್ರಮವು ಕಡ್ಡಾಯವಿರುವ ಶಿಕ್ಷಣಕ್ರಮಗಳ ಸಂಪರ್ಕ ಕಾರ್ಯಕ್ರಮ ಹಾಗೂ ಪ್ರಾಯೋಗಿಕ ಪರೀಕ್ಷೆಗಳೂ ಸಹ ಪೂರ್ಣಗೊಂಡಿರುತ್ತವೆ.

ಈ ಮೇಲಿನ ಕಾರಣಗಳಿಂದ ಉಲ್ಲೇಖಿಸಿರುವ 117 ವಿದ್ಯಾರ್ಥಿಗಳಿಗೆ 2024-25ರ ಜುಲೈ ಆವೃತ್ತಿಗೆ ಪ್ರವೇಶಾತಿ ನವೀಕರಣ ಮಾಡುವುದು ಸೂಕ್ತವಾಗಿರುವುದಿಲ್ಲ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅವರುಗಳು 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿ ನವೀಕರಣ ಕಾರ್ಯವನ್ನು ಮಾಡಿಕೊಂಡು, ವಿವಿ ನಿಲಯವು 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ನವೀಕರಣ ವಿದ್ಯಾರ್ಥಿಗಳಿಗೆ ಒದಗಿಸುವ ಸಂಪೂರ್ಣ ಶೈಕ್ಷಣಿಕ ಸೇವೆಗಳನ್ನು (ಸಂಪರ್ಕ ಕಾರ್ಯಕ್ರಮ, ಪ್ರಾಯೋಗಿಕ ಕಾರ್ಯಕ್ರಗಳು/ಪರೀಕ್ಷೆಗಳು, ಇತರೆ...) ಪಡೆದು ಆಂತರಿಕ ನಿಬಂಧನೆ ಅಂಕಗಳು ಲಭ್ಯವಾಗಿ ಮುಂಬರುವ ವಾರ್ಷಿಕ/ಸೆಮಿಸ್ಟರ್ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದೆಂಬುದನ್ನು ತಮ್ಮ ಗಮನಕ್ಕೆ ತರಲಾಗಿದೆ.

ತಮ್ಮ ನಂಬುಗೆಯ,

23/8/25

ಕುಲಸಚಿವ

ಪ್ರತಿ:

1. ಡೀನ್(ಶೈಕ್ಷಣಿಕ), ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4. ಉಪಕುಲಸಚಿವರು, ಕಾನೂನು ಘಟಕ, ಕರಾಮುವಿ, ಮೈಸೂರು – ಮುಂದಿನ ಅಗತ್ಯ ಕ್ರಮಕ್ಕಾಗಿ.
5. ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ – ವಿವಿ ಅಧಿಕೃತ ಅಂತರ್ಜಾಲ (www.ksoumysuru.ac.in) ರಲ್ಲಿ ಪ್ರಕಟಿಸುವ ಮೂಲಕ ಗಮನಕ್ಕೆ ತರಲಾಗಿದೆ.
6. ಡಾ: ನವೀನ್ ಕುಮಾರ್, ಸಂಯೋಜನಾಧಿಕಾರಿಗಳು, ವಿವಿಯ ಅಧಿಕೃತ ಅಂತರ್ಜಾಲ ನಿರ್ವಹಣೆ, ಕರಾಮುವಿ ಇವರಿಗೆ – ಈ ಪತ್ರವನ್ನು ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸುವುದು.
7. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು. 8. ಕಚೇರಿ ಪ್ರತಿ.